ಆ) ವಿಷ್ಣು ಸಮುದ್ರ ಕೆರೆಯ ಅಂಚಿನಲ್ಲಿ ಪ್ರಸಿದ್ಧ ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನ ನಿರ್ಮಾಣದ ಸಮಯದಲ್ಲಿಯೇ ಭಕ್ತಾದಿಗಳ ಸ್ನಾನಕ್ಕಾಗಿ ಸ್ನಾನಘಟ್ಟ ನಿರ್ಮಾಣವಾಗಿರುತ್ತದೆ. (ಸಣ್ಣ ನೀರಾವರಿ ಇಲಾಖಾ ವತಿಯಿಂದ ನಿರ್ಮಾಣಗೊಂಡಿರುವುದಿಲ್ಲ.)

ಇ) ಈ ಸ್ನಾನಘಟ್ಟದ ನಿರ್ವಹಣೆ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರದೆ ಇರುವುದರಿಂದ ಮಲೀನತೆ ಬಗ್ಗೆ ಮತ್ತು ಪ್ರವಾಸಿಗರ ಸ್ನಾನಕ್ಕೆ ಅನುಕೂಲತೆಯ ಬಗ್ಗೆ ಪರಿಶೀಲನೆ ನಡೆಸುತ್ತಿಲ್ಲ. ಚನ್ನಕೇಶವಸ್ವಾಮಿ ದೇವಸ್ಥಾನದ ಸಮಿತಿಯವರ ಕೋರಿಕೆಯಂತೆ ಪ್ರತಿ ವರ್ಷ ಚನ್ನಕೇಶವ ಸ್ವಾಮಿ ಜಾತ್ರೋತ್ಸವದ ಸಮಯದಲ್ಲಿ ಸ್ನಾನಘಟ್ಟವನ್ನು ಇಲಾಖೆಯಿಂದ ಸ್ವಚ್ಛಗೊಳಿಸಲಾಗುತ್ತಿದೆ.

ಈ) ಸದರಿ ಸ್ನಾನಘಟ್ಟದ ನಿರ್ವಹಣೆಯು ಈ ಇಲಾಖೆಗೆ ಒಳಪಡದ ಕಾರಣ ಶಾಶ್ವತ ಯೋಜನೆ ರೂಪಿಸುವುದು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

ಆಲಮಟ್ಟಿ ಎಡದಂಡೆ ಹಾಗೂ ಬಲದಂಡೆ ಕಾಲುವೆ

28 (52) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ ಎಡದಂಡೆ ಹಾಗೂ ಬಲದಂಡೆ ಉಪ ಕಾಲುವೆಗಳು ಹಾಗೂ ಹೊಲಗಾಲುವೆಗಳು ಸಂಪೂರ್ಣ ಕಳಪೆ ಮಟ್ಟದ್ದಾಗಿದ್ದು, ರೈತರ ಹೊಲಗಳಿಗೆ ಸರಿಯಾಗಿ ನೀರು ಹರಿಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು);

ಆ) ಹಾಗಿದ್ದಲ್ಲಿ, ಈ ಕಾಲುವೆಗಳನ್ನು ದುರಸ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಹಾಗಿದ್ದಲ್ಲಿ, ಎಂದಿನಿಂದ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಆಲಮಟ್ಟಿ ಎಡದಂಡೆ ಹಾಗೂ ಬಲದಂಡೆ ಕಾಲುವೆಗಳ ಅಡಿಯಲ್ಲಿ ಬರುವ ಉಪಕಾಲುವೆಗಳು ಮತ್ತು ಹೊಲಗಾಲುವೆಗಳಲ್ಲಿ

ಸುಮಾರು 7 ವರ್ಷಗಳಿಂದ ರೈತರು ನೀರಾವರಿ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

ಕಾಲುವೆಗಳಲ್ಲಿ ಸತತವಾಗಿ ನೀರು ಹರಿಯುತ್ತಿದ್ದು, ಕೆಲವೊಂದು ಉಪಕಾಲುವೆಗಳಲ್ಲಿ ಹೂಳು ತುಂಬಿದ್ದು, ಕಂಟಿಗಳು ಬೆಳೆದಿದ್ದು, ಲೈನಿಂಗ್ ಹಾಳಾಗಿ ನೀರಿನ ಹರಿಯುವಿಕೆಯಲ್ಲಿ ತೊಂದರೆ ಆಗಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಉಪಕಾಲುವೆಗಳನ್ನು ಕ್ಲೋಜರ್ ಅವಧಿಯಲ್ಲಿ ದುರಸ್ತಿ ಮಾಡಿಸಿ, ನೀರು ಸರಾಗವಾಗಿ ಹರಿಯುವಂತೆ ಕ್ರಮ ಜರುಗಿಸಲಾಗುತ್ತಿದೆ. ಇದಲ್ಲದೇ ಉಪಕಾಲುವೆಗಳಲ್ಲಿ ವಿಶೇಷವಾಗಿ ತೊಂದರೆ ಉಂಟಾದಲ್ಲಿ ತಕ್ಷಣವೇ ದುರಸ್ತಿ ಕಾರ್ಯ ಕೈಗೊಂಡು ನೀರನ್ನು ಸರಾಗವಾಗಿ ಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹೊಲಗಾಲುವೆಗಳ ದುರಸ್ತಿಗಾಗಿ ಅವಕಾಶವಿರುವುದಿಲ್ಲ. ನೀರು ಬಳಕೆದಾರರ ಸಹಕಾರ ಸಂಘಗಳ ಮುಖಾಂತರ ನಿರ್ವಹಣೆಯನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ.

ಇ) ಆಲಮಟ್ಟಿ ಎಡದಂಡೆ ಕಾಲುವೆ ದುರಸ್ತಿಗಾಗಿ 2011–12ನೇ ಸಾಲಿನ ಕ್ಲೋಜರ್ ಅವಧಿಯಲ್ಲಿ ರೂ.120.00 ಲಕ್ಷಗಳ ಮೊತ್ತದ ಕಾಮಗಾರಿಗಳ ಟೆಂಡರ್‌ನ್ನು ಕರೆಯಲಾಗಿದ್ದು, ಕಾಮಗಾರಿಗಳನ್ನು ಶೀಘ್ರದಲ್ಲೇ ಕೈಗೊಳ್ಳಲಾಗುವುದು.

ಜವಳಿ ಪಾರ್ಕ್ ನಿರ್ಮಾಣ

35 (12) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜವಳಿ ಪಾರ್ಕ್ ನಿರ್ಮಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತೀರ್ಮಾನಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಈ ಜವಳಿ ಪಾರ್ಕ್ ನಿರ್ಮಿಸಲು ಎಷ್ಟು ಜಮೀನು ಬೇಕಾಗುತ್ತದೆ; ಇದಕ್ಕೆ ಎಷ್ಟು ಹಣವನ್ನು ಮೀಸಲಿಡಲಾಗಿದೆ (ವಿವರ ಒದಗಿಸುವುದು)?